ಬೆಳಗಾಂ ಜಿಲ್ಲೆಯನ್ನು ಅಭಾವ ಪೀಡಿತ ಪ್ರದೇಶವೆಂದು ಘೋಷಣೆ ಮಾಡುವ ಬಗ್ಗೆ

573 ಶ್ರೀ ಸುಭಾಷ್ ಜೋಷಿ (ನಿಪ್ಪಾಣಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರವು ಬೆಳಗಾವಿ ಜಿಲ್ಲೆಯನ್ನು ಅಭಾವ ಪೀಡಿತ ಜಿಲ್ಲೆಯೆಂದು ಘೋಷಿಸುವುದೇ?

ಆ) ಹಾಗಿದ್ದಲ್ಲಿ, ಸರ್ಕಾರವು ಯಾವಾಗ ಬರ ಪರಿಹಾರ ಕಾಮಗಾರಿಗಳನ್ನು ಕೈಗೊಳ್ಳುವುದು; ಮತ್ತು

ಇ) ಬಿಡುಗಡೆ ಮಾಡಲಾಗುವ ಮೊತ್ತ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):–

ಅ) ಸದ್ಯದ ಪರಿಸ್ಥಿತಿಯಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಆ) ತೊಂದರೆ ಇರುವ ಪ್ರದೇಶಗಳಲ್ಲಿ ಕುಡಿಯುವ ನೀರಿನ ಪೂರೈಕೆ ಕಾರ್ಯಕ್ರಮವನ್ನು ಕೈಗೊಂಡಿದೆ.

1) ಯೋಜನಾ ಕಾರ್ಯಕ್ರಮಗಳಡಿಯಲ್ಲಿ ಉದ್ಯೋಗ ಸೃಜನೆ ಕಾರ್ಯಕ್ರಮಗಳನ್ನು ಕೈಗೊಂಡಿದೆ.

2) ಪ್ರಕೃತಿ ವಿಕೋಪ ಪರಿಹಾರ ನಿಧಿ ಆಡಿಯಲ್ಲಿ ಈ ಕೆಳಕಂಡಂತೆ ಹಣವನ್ನು ಬಿಡುಗಡೆ ಮಾಡಿದೆ–

	(ಲಕ್ಷ ರೂ.ಗಳಲ್ಲಿ)
ಅ) ಕುಡಿಯುವ ನೀರಿನ ಪೂರೈಕೆ	29.00
ಆ) ಉದ್ಯೋಗ ಸೃಜನೆ	10.00
ಒಟ್ಟು	39.00 ಲಕ್ಷ

ಹಾಸನ ಜಿಲ್ಲೆಯಲ್ಲಿ ಬರಗಾಲವೆಂದು ಘೋಷಿಸಿರುವ ಹಳ್ಳಿಗಳ ಬಗ್ಗೆ

517. ಶ್ರೀ ಬಿ. ಶಿವರಾಮು (ಗಂಡಸಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಸನ ಜಿಲ್ಲೆಯಲ್ಲಿ ಬರಗಾಲವೆಂದು ಘೋಷಿಸಿರುವ ಹಳ್ಳಿಗಳೆಷ್ಟು (ತಾಲ್ಲೂಕುವಾರು ವಿವರ ಒದಗಿಸುವುದು)

ಆ) ಬರಗಾಲ ಪ್ರದೇಶಕ್ಕೆ ಸರ್ಕಾರ ಇಲ್ಲಿಯವರೆಗೆ ಒದಗಿಸಿರುವ ಸೌಲಭ್ಯಗಳೇನು?

ಇ) ಬರಗಾಲ ಪ್ರದೇಶದ ರೈತರಿಗೆ ಕಂದಾಯ ಮತ್ತು ಸಾಲ ಮನ್ನಾ ಮಾಡುವ ಅಥವಾ ಮುಂದೂಡುವ ಆಲೋಚನೆ ಸರ್ಕಾರ ಮಾಡಿದೆಯೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):–

ಅ) 1,213 ಹಳ್ಳಿಗಳಲ್ಲಿ ತೊಂದರೆ ಇರುವುದಾಗಿ ಗುರುತುಪಡಿಸಿದೆ.

ತಾಲ್ಲೂಕುವಾರು ವಿವರ ಈ ರೀತಿ ಇದೆ –

1)	ಅರಸೀಕೆರೆ	370
2)	ಹಾಸನ	139
3)	ಹೊಳೆನರಸೀಪುರ	159
4)	ಚನ್ನರಾಯಪಟ್ಟಣ	287
5)	ಬೇಲೂರು	178
6)	ಅರಕಲಗೂಡು	80
	ಒಟ್ಟು	1,213

ಆ) ಕುಡಿಯುವ ನೀರಿನ ಪೂರೈಕೆ, ಉದ್ಯೋಗ ಸೃಜನೆ ಮತ್ತು ಮೇವು ಪೂರೈಕೆ ಕಾರ್ಯಕ್ರಮಗಳನ್ನು ಕೈಗೊಂಡಿದೆ.

ಇ) ಸದ್ಯಕ್ಕೆ ಅಂತಹ ಪ್ರಸ್ತಾವನೆ ಇರುವುದಿಲ್ಲ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಕಂದಾಯ ಇಲಾಖೆಯ ಅಧೀನದಲ್ಲಿ ಬರುವ ಜಮೀನಿನ ವಿಸ್ತೀರ್ಣದ ಬಗ್ಗೆ

610 ಶ್ರೀ ಆರ್.ಎನ್. ನಾಯಕ್ (ಭಟ್ಕಳ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ಕಂದಾಯ ಇಲಾಖೆಯ ವಶದಲ್ಲಿರುವ ಜಮೀನೆಷ್ಟು (ತಾಲ್ಲೂಕುವಾರು ಮಾಹಿತಿ ನೀಡುವುದು) ;

ಆ) ಸಾರ್ವಜನಿಕ ಉಪಯೋಗಕ್ಕಾಗಿ ನೀಡುವ ಬಗ್ಗೆ ಇಲಾಖೆಯು ಸಾಕಷ್ಟು ಜಮೀನುಗಳನ್ನು ಹೊಂದಿದೆಯೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):–

ಅ) ಒಟ್ಟು ವಿಸ್ತೀರ್ಣ 4,116 ಎಕರೆಗಳು.

	ತಾಲ್ಲೂಕು	ಎಕರೆ
1)	ಕಾರವಾರ	142
2)	ಅಂಕೋಲಾ	170
3)	ಕುಮಟಾ	298
4)	ಹೊನ್ನಾವರ	197
5)	ಭಟ್ಕಳ	218
6)	ಸಿರಸಿ	1504
7)	ಸಿದ್ದಾಪುರ	327
8)	ಯಲ್ಲಾಪುರ	56